ಕೆಲಸಗಳು ಸಿಗುತ್ತವೆ ಎಂದು ಹೇಳುತ್ತಿದ್ದೇವೆ. ಇದುವರೆಗೆ ಇಲ್ಲಿ ಯಾವ ಕೈಗಾರಿಕೆಯೂ ಬರಲಿಲ್ಲ. ಇಲ್ಲಿ ಸಿಗುವ ಕಬ್ಬಿಣದ ಅದಿರು ಹಾಗೂ ಸುಣ್ಣಕಲ್ಲುಗಳನ್ನು ಪಯೋಗಿಸಿಕೊಂಡು ಇದಕ್ಕನುಕೂಲವಾಗುವಂತಹ ಒಂದು ಕೈಗಾರಿಕೆಯನ್ನು ಇಲ್ಲೇಕೆ ಸ್ಥಾಪನೆ ಮಾಡಬಾರದು ? ಇದರ ಬಗ್ಗೆ ಸರಿಯಾದ ಒಂದು ವರದಿ ತರಿಸಿಕೊಂಡು ಬೇಗನೆ ಇಲ್ಲಿ ಕೈಗಾರಿಕೆಯಾಗುವಂತೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ :—ಬಹಳ ಉತ್ತಮವಾದ ಸಲಹೆಯನ್ನು ಮಾನ್ಯ ಸದಸ್ಯರು ಇಲ್ಲಿ ಕೊಟ್ಟಿದ್ದಾರೆ. ಇದನ್ನು ಸರಕಾರ ತೀವ್ರಗತಿಯಿಂದ ಪರಿಶೀಲನೆ ಮಾಡುತ್ತದೆ.

## INDUSTRIAL EXTENSION OFFICERS IN SHIMOGA DISTRICT

908. Sri S. M. Sheernaly Chandrasekhar (Hosanagar).—

Will the Minister for Industries be pleased to state :—

(a) the number of Industrial Extension Officers working in Shimoga District ;

(b) the nature of work allotted to them ;

(c) whether they have undertaken any project in Shimoga District ?

Sri S. M. Krishna (Minister for Industries).—

(a) Four.

(b) As per statement placed on the Table of the House.

(c) The Industries Extension Officers assist the District level officers and are not expected to undertake independent projects.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ :—(೪) ಗೆ ಉತ್ತರವಾಗಿ ಸರಕಾರದವರು ಅವರೇ ಸ್ವತಂತ್ರವಾಗಿ ಯೋಜನೆಗಳನ್ನು ಕೈಕೊಳ್ಳಬೇಕಾಗಿರುವುದಿಲ್ಲ ಎಂದಿದೆ. ಇಂತಹ ಅಧಿಕಾರಿಗಳನ್ನು ಏಕೆ ನೇಮಕ ಮಾಡಬೇಕಾಗಿತ್ತು ? ಇಂತಹ ಅಧಿಕಾರಿಗಳಿಂದ ಏನಾದರೂ ಸರಕಾರಕ್ಕೆ ಯೋಜನೆಗಳು ಬಂದಿವೆಯೇ ? ಯಾವ ಯಾವ ಏರಿಯಾದಲ್ಲಿ ಯಾವ ಕೈಗಾರಿಕೆಗಳನ್ನು ಇಲ್ಲಿ ಮಾಡಬಹುದು ಎಂದು ಇಲ್ಲಿರುವ ಎಕ್ಸ್‌ಟೆನ್‌ಷನ್ ಆಫೀಸರುಗಳು ಸರಕಾರಕ್ಕೆ ವರದಿ ಕಳುಹಿಸಿದ್ದಾರೆ ?

ಶ್ರೀ ಎಸ್. ಎಂ. ಕೃಷ್ಣ :—ಎಕ್ಸ್‌ಟೆನ್‌ಷನ್ ಆಫೀಸರುಗಳು ಇಲ್ಲಿ ಎಂತಹ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬಹುದು ಎನ್ನುವುದರ ಬಗ್ಗೆ ಇಲ್ಲಿ ಕೈಗಾರಿಕೆ ಮಾಡಲು ಬರುವ ಉದ್ದಿಮೆದಾರರುಗಳಿಗೆ ಆಡ್ವೈಸ್ ಕೊಡಬಹುದು. ಮತ್ತು ಅವರಿಗೆ ಬೇಕಾದ ಸಹಕಾರ ಸವಲತ್ತುಗಳನ್ನು ಸರಕಾರದ ಮೂಲಕ ಕೊಡಿಸಬೇಕೆಂದು ಅವರನ್ನು ಮೊದಲು ನೇಮಕ ಮಾಡಲಾಯಿತು. ಇಲ್ಲಿರುವ ಎಕ್ಸ್‌ಟೆನ್‌ಷನ್ ಆಫೀಸರುಗಳು ಕೆಲವರು ಡಿಪ್ಲೊಮಾ ಹೋಲ್ಡರುಗಳಾಗಿದ್ದಾರೆ ಮತ್ತು ಕೆಲವರು ಸಾಧಾರಣವಾದ ಗ್ರಾಜುಯೇಟರುಗಳಾಗಿದ್ದಾರೆ. ಆದರೆ ಅವರೇ ನಮಗೆ ಬೇಕಾದ ಆಡ್ವೈಸನ್ನು ಕಳುಹಿಸಲು ಅವರಿಗೆ ಸಾಕಷ್ಟು ಎಕ್ಸ್‌ಪೀರಿಯನ್ಸ್ ಇಲ್ಲ. ಆದುದರಿಂದ ಇನ್ನು ಮೇಲೆ ಕೈಗಾರಿಕಾ ಇಲಾಖೆಯಲ್ಲಿ ಇಂತಹ ಹುದ್ದೆಗಳಿಗೆ ರೆಕ್ರೂಟ್ ಮಾಡುವಾಗ ಯಾರು ಕೈಗಾರಿಕೆಗಳಲ್ಲಿ ತರಬೇತಿ

ಪಡೆದು ಸಾಕಷ್ಟು ಪರಿಣತಿ ಪಡೆದಿರುತ್ತಾರೋ ಅಂತಹವರನ್ನೇ ಸರಕಾರ ಚುನಾಯಿಸಬೇಕೆಂದು ತೀರ್ಮಾನ ಮಾಡಿದೆ, ಇದರಿಂದ ಕೈಗಾರಿಕೆ ಮಾಡಲು ಬರುವ ಉದ್ದಿಮೆದಾರರುಗಳಿಗೂ ಸಹಾಯವಾಗುತ್ತದೆ, ಮಾನ್ಯ ಸದಸ್ಯರು ಇಂಗಿತವನ್ನು ಸರಕಾರ ಅರ್ಥಮಾಡಿಕೊಂಡಿದೆ ಎಂದು ಮಾತ್ರ ಇಲ್ಲಿ ಹೇಳಬಲ್ಲೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ :—ಒಂದು ವರ್ಷದಲ್ಲಿ ತಾವು ತೆಗೆದುಕೊಂಡಿರುವ ನಾಲ್ಕು ಎಕ್ಸ್‌ಟೆನ್‌ಷನ್ ಆಫೀಸರುಗಳು ಯಾವ ಯಾವ ಹಳ್ಳಿಗಳಿಗೆ ಹೋಗಿ ಏನೇನು ಕಾರ್ಯ ಕ್ರಮಗಳನ್ನು ತೆಗೆದುಕೊಂಡಿದ್ದಾರೆ ಮತ್ತು ಎಲ್ಲಿ ಹೊಸ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಸಲಹೆ ಮಾಡಿದ್ದಾರೆ ಇದರ ಬಗ್ಗೆ ವಿವರಗಳು ಬೇಕು. ಸರಕಾರ ಇದನ್ನು ತಿಳಿಸುತ್ತದೆಯೇ ?

ಶ್ರೀ ಎಸ್. ಎಂ. ಕೃಷ್ಣ :—ಶಿವಮೊಗ್ಗಾದಲ್ಲಿ ರೂರಲ್ ಇಂಡಸ್ಟ್ರೀಸ್ ಪ್ರಾಜೆಕ್ಟ್ ಬಹು ಪ್ರಾಮುಖ್ಯವಾದುದು, ಇದು 1966ನೇ ಇಸವಿಯಲ್ಲೇ ಪ್ರಾರಂಭವಾಗಿದೆ. 1970ನೇ ಡಿಸೆಂಬರು ತಿಂಗಳಲ್ಲಿ ಕೂಡ ಈ ಜಿಲ್ಲಿಗೆ ಯಾವುದೂ ಇಂಡಸ್ಟ್ರೀಗಳು ಬರಲಿಲ್ಲ. ಇದರ ಪ್ರಿಲಿಮಿನರಿ ಕೆಲಸಗಳೇ ಆಗಿ ಈಗ ಮುಗಿದಿದೆ. ರೂರಲ್ ಇಂಡಸ್ಟ್ರೀಸ್ ಪ್ರಾಜೆಕ್ಟ್‌ನಲ್ಲಿ ಈ ಎಕ್ಸ್‌ಟೆನ್‌ಷನ್ ಆಫೀಸರುಗಳು ಉದ್ದಿಮೆದಾರರುಗಳಿಗೆ ಏನೇನು ಸವಲತ್ತುಗಳನ್ನು ಕೊಡುತ್ತಾರೆ ಅದನ್ನು ಅವರಿಗೆ ತಿಳಿಸಬೇಕೆಂದು ಹಾಗೂ ಇದರ ಬಗ್ಗೆ ಪ್ರಕಟಣೆ ಇತ್ಯಾದಿ ಕೆಲಸಗಳನ್ನು ಮಾಡುವುದು, ಹೊಸ ಉದ್ದಿಮೆದಾರರು ಬಂದರೆ ಅವರ ಇಂಡಸ್ಟ್ರೀಯನ್ನು ಯಾವ ರೀತಿ ಪ್ರಮೋಟು ಮಾಡಬಹುದು, ಇವನೆಲ್ಲಾ ಜನರಿಗೆ ತಿಳಿಸಿ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಈ ಆಫೀಸರುಗಳು ಇರುವುದು. ನಾನು ನಮ್ಮ ಇಲಾಖೆಯ ಬಡ್ಜೆಟ್ಟು ಡಿಮ್ಯಾಂಡು ಸಮಯದಲ್ಲಿ ಉತ್ತರ ಕೊಡುವಾಗ ಹೇಳಿದ ಹಾಗೆ ಪ್ರತಿಯೊಂದು ಡಿಸ್ಟ್ರಿಕ್ಟ್‌ಗೂ ಒಂದು ಟಾರ್ಜೆಟ್‌ನ್ನು ನಿಗದಿ ಮಾಡಿ ತಿಳಿಸುತ್ತೇವೆ. ಆ ರೀತಿಯಾಗಿ ಒಂದು ಪ್ರಾಜೆಕ್ಟು ರಿಪೋರ್ಟನ್ನು ವಿಲೇಜು ಲೆವಲ್‌ನಲ್ಲಿ ಮಾಡಿ ಅದನ್ನು ರೆವ್ಯೂ ಮಾಡಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ.

ಶ್ರೀ ಎಸ್ ಎಂ. ಶೀರನಾಳಿ ಚಂದ್ರಶೇಖರ್ : —ಈ ಎಕ್ಸ್‌ಟೆನ್‌ಷನ್ ಆಫೀಸರ್‌ಗಳು ಮತ್ತು ಡಿಸ್ಟ್ರಿಕ್ಟ್ ಆಫೀಸರ್‌ಗಳು ಎಲ್ಲಿದ್ದಾರೆ ಅವರುಗಳಿಗೆ ಲೈಸೆನ್ಸ್ ಕೊಡುವ ಅಧಿಕಾರ ಕೊಟ್ಟಿದ್ದೀರಾ ?

ಶ್ರೀ ಎಸ್. ಎಂ. ಕೃಷ್ಣ :—ಲೈಸೆನ್ಸ್ ಕೊಡುವ ಅಧಿಕಾರ ಕೊಟ್ಟಿಲ್ಲ ; ಆದರೆ ಲೈಸೆನ್ಸ್ ರೆಕಮೆಂಡ್ ಮಾಡುವ ಅಧಿಕಾರ ಕೊಟ್ಟಿದ್ದೇವೆ.

## PROGRESS MADE BY CHITRADURGA COPPER COMPANY

668. Sri Doddathimmaiah (Gulur).—

Will the Minister for Industries be pleased to state :—

The progress made by the Chitradurga Copper Company in exploiting Copper Deposits in Kalyadi and Tinthini in Hassan and Gulbarga Districts ?

Sri S. M. Krishna (Minister for Industries).—

Progress Report appended.

## PROGRESS REPORT

The Chitradurga Copper Company is not doing any work at Tithini and Kalyadi. These works are being undertaken by the Department of Mines and Geology.